# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: ದಿನಕರ್ ಜೋಶಿ

■ ಕನ್ನಡಕ್ಕೆ: ಡಿ.ಎನ್. ಶ್ರೀನಾಥ್

ಕಲೆ: ಮನೋಹರ ಆಚಾರ್ಯ



## ಗಾಂಧಿ ಮುಖದಲ್ಲಿ ದುಃಖದ ಛಾಯೆ

ಜೋಸೆಫ್ ಸ್ನೇಹದಿಂದ ಮತ್ತೆ ಹರಿಲಾಲನ ಎರಡೂ ಕೈಗಳನ್ನು ಹಿಡಿದು ಮೆಲ್ಲನೆ ಒತ್ತಿದ. ನಂತರ ಅವನ ಕಣ್ಣುಗಳಲ್ಲಿ ಕಣ್ಣಿಟ್ಟು ನೋಡುತ್ತಾ ಹೇಳಿದ, 'ಹರಿಲಾಲ, ನನ್ನ ಶುಭ ಹಾರೈಕೆ ಸದಾ ನಿನ್ನೊಂದಿಗಿರುವುದು, ನಿನ್ನ ಮಾರ್ಗ ಸತ್ಯದ ಮಾರ್ಗವಾಗಿದೆ ಎಂಬುದನ್ನು ನನ್ನಿಂದ ತೀರ್ಮಾನಿಸಲು ಸಾಧ್ಯವಿಲ್ಲ. ದೇವರು ನಿನಗೆ ಒಳಿತನ್ನು ಮಾಡಲಿ.'

ಜೋಸೆಫ್‌ನಿಂದ ಬೀಳ್ಕೊಂಡು ಹರಿಲಾಲ ಮನೆಗೆ ಬಂದ. ಬಾಪೂ ಇನ್ನೂ ಕಛೇರಿಯಲ್ಲಿದ್ದರು. ಹರಿಲಾಲ ಈಗ ನಿರ್ಧಾರವನ್ನು ಮಾಡಿದ್ದ. ಜೋಸೆಫ್‌ನೊಂದಿಗೆ ಮಾತಾಡಿದ ನಂತರ ಈಗ ಅವನಲ್ಲಿ ಒಂದು ರೀತಿಯ ಉತ್ಸಾಹ ಮತ್ತು ಬಲ ಬಂದಿತ್ತು. ಇದುವರೆಗೆ ಅಸ್ಪಷ್ಟವಾಗಿದ್ದ ಎಲ್ಲವೂ ಈಗ ಸ್ಪಷ್ಟವಾಗಿದ್ದವು. ಇಲ್ಲಿಂದ ಆದಷ್ಟು ಬೇಗ ಹೊರಟು ಸ್ಟೇಷನ್‌ನಿಂದ ಹಾದು ಡರಬನ್‌ಗೆ ಹೋಗಬೇಕು, ಅಲ್ಲಿಂದ ಹಿಂದೂಸ್ತಾನಕ್ಕೆ ಹೋಗುವ ಹಡಗನ್ನು ಹಿಡಿಯಬೇಕು ಎಂದು ಅವನು ಮನಸ್ಸಿನಲ್ಲಿಯೇ ಮುಂದಿನ ಕಾರ್ಯಕ್ರಮಗಳನ್ನು ಹಾಕಿಕೊಂಡ.

ಈ ಹಿಂದೆ ಅವನು ಡರಬನ್ ರೇವುಪಟ್ಟಣದಲ್ಲಿ ಇಳಿಯುವಾಗ ತನ್ನ ಬಳಿ ಟಿನ್ ಬಾಕ್ಸ್ ಇಟ್ಟುಕೊಂಡಿದ್ದ. ಈಗ ಅದಕ್ಕೆ ಕೆಲವು ಬಟ್ಟೆಗಳನ್ನು ಹಾಕಿದ, ಬಾಪೂ ಕೊಟ್ಟಿದ್ದ ಭಗವದ್ಗೀತೆಯ ಪ್ರತಿಯನ್ನು ಇಟ್ಟ. ನಂತರ ಒಂದು ಮೂಲೆಯಲ್ಲಿಟ್ಟಿದ್ದ ಅಲ್ಬಮ್‌ನಿಂದ ಬಾಪೂ ಅವರ ಭಾವಚಿತ್ರವೊಂದನ್ನು ತೆಗೆದುಕೊಂಡು ಪೆಟ್ಟಿಗೆಯಲ್ಲಿಟ್ಟ. ಅದಕ್ಕೂ ಮೊದಲು ಸಾಕಷ್ಟು ಹೊತ್ತು ಆ ಭಾವಚಿತ್ರವನ್ನು ನೋಡುತ್ತಿದ್ದ, ನಂತರ ಅದನ್ನು ಗೀತೆಯ ಮಧ್ಯದಲ್ಲಿಟ್ಟ. ಎಲ್ಲಾ ಸಾಮಾನುಗಳನ್ನು ಬಾಕ್ಸ್ ಒಳಗೆ ಇಟ್ಟ ನಂತರ, ಅದನ್ನು ಮುಚ್ಚಿದ. ಜೋಹಾನ್ಸ್‌ಬರ್ಗ್‌ನಿಂದ ರೈಲು ಹೊರಡಲು ಸ್ವಲ್ಪ ಸಮಯವಿತ್ತು.

## ಹದಿನಾಲ್ಕು

ಕಚೇರಿಯ ಸಾಕಷ್ಟು ಕೆಲಸಗಳನ್ನು ನಿರ್ವಹಿಸಿದ ನಂತರ ಬಾಪೂ ಅವರು ಮನೆಗೆ ಬಂದಾಗ ಮಧ್ಯಾಹ್ನದ ಸೂರ್ಯ ಪಶ್ಚಿಮದೆಡೆಗೆ ಸರಿದಿದ್ದ. ಬಾಪೂ ಅವರಿಗೆ ಮನೆಯಲ್ಲೂ ಬಿಡುವಿರಲಿಲ್ಲ. ಭೇಟಿ ಮಾಡಲು ಬರುವವರಿಗೆ ಮುಂದಿನ ಒಂದು ಕೋಣೆಯನ್ನು ನಿಗದಿಪಡಿಸಲಾಗಿತ್ತು; ಆ ಕೋಣೆ ಕಿಕ್ಕಿರಿದು ತುಂಬಿತ್ತು. ಎಲ್ಲರೂ ಬಾಪೂ ಅವರಿಗಾಗಿ ಕಾಯುತ್ತಿದ್ದರು. ಒಬ್ಬನ ಗಲ್ಲವನ್ನು ಸವರುತ್ತಾ, ಇನ್ನೊಬ್ಬನ ಬೆನ್ನನ್ನು ತಟ್ಟುತ್ತಾ, ಮಗದೊಬ್ಬನೆದುರು ನಿರ್ದೋಷದ ನಗುವನ್ನು ಸೂಸುತ್ತಾ ಬಾಪೂ ಎಲ್ಲರೊಂದಿಗೆ ಬೆರೆಯುತ್ತಿದ್ದರು. ಭೇಟಿಗಾರರೊಂದಿಗೆ ಕೆಲಸವನ್ನು ಆರಂಭಿಸುವುದಕ್ಕೂ ಮೊದಲು, ತಮ್ಮ ಗೈರು ಹಾಜರಿಯಲ್ಲಿ ಮನೆಗೆ ಬಂದ ಸಂದೇಶಗಳು ಅಥವಾ ಅಂಚೆ ಪತ್ರಗಳನ್ನು ನೋಡುವುದು ಬಾಪೂ ಅವರ ಅಭ್ಯಾಸವಾಗಿತ್ತು. ಇಂದೂ ಸಹ ಅವರು ಮೇಜಿನ ಮೇಲಿದ್ದ ಪತ್ರಗಳ ಮೇಲೆ ದೃಷ್ಟಿ ಹರಿಸಿದರು. ಒಂದು ಲಕೋಟೆಯ ಮೇಲೆ ಬರೆದಿದ್ದ ಅಕ್ಷರಗಳನ್ನು ನೋಡಿ ಬಾಪೂ ಅವರಿಗೆ ಆಶ್ಚರ್ಯವಾಯಿತು. ಆ ಬರವಣಿಗೆ ಹರಿಲಾಲನದಾಗಿತ್ತು. ಲಕೋಟೆಯ ಮೇಲೆ ಬರೆಯಲಾಗಿತ್ತು

'ಪರಮ ಪೂಜ್ಯ ತಂದೆಯವರಿಗೆ, ನಿಮ್ಮ ಪುತ್ರ ಹರಿಲಾಲನ ವೈಯಕ್ತಿಕ ಪತ್ರ.'